ಕೆ.ಸಿ.ಡಿ. ಸಮಾಚಾರ

ಶಿಕ್ಷಣ-ಸಂಸ್ಕೃತಿ-ಸಮಾಜ
ನಮ್ಮ ಧ್ಯೇಯ, ನಿಷ್ಠೆ

KCD JOURNALISM CLUB DHARWAD

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ: 4 ಸಂಪುಟ: 1 ಪುಟ: 1

# 'ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಎಲ್.ಐ.ಸಿ ಪಾತ್ರ'




ಚಿತ್ರದಲ್ಲಿ ರಾಜ್ಯ ಸಬಾ ಸದಸ್ಯ ಡಾ. ಆಸ್ಕರ್ ಫರ್ನಾಂಡಿಸ್ ಮಾತನಾಡುತ್ತಿರುವದು. ಉದಯ ಗದಗಕರ್, ಕುಲಪತಿ ಪ್ರಮೋದ ಗಾಯಿ, ಡಾ. ಎಸ್. ಎಸ್. ಕಟ್ಟಿಮನಿ, ಡಾ ರಾಜೇಶ್ವರಿ ಮಹೇಶ್ವರಯ್ಯ ಡಾ. ಎಸ್. ಹೊನ್ನಪ್ಪ ಇದ್ದಾರೆ.

"ನಾನು ಕೂಡ ಎಲ್‌ಐಸಿಯಲ್ಲಿ ಕೆಲಸ ಮಾಡಿದವನು. ನಾನು ಕೆಲಸ ಮಾಡುವ ಅವಧಿಯಲ್ಲಿ ಪ್ರತಿದಿನ $ 3 ನೀಡಲಾಗುತ್ತಿತ್ತು. ಎಲ್.ಐ.ಸಿ ನನಗೆ ಉದ್ಯೋಗ ನೀಡುವುದರ ಜೊತೆಗೆ ಉತ್ತಮ ಭವಿಷ್ಯವನ್ನು ರೂಪಿಸಿಕೊಟ್ಟಿತು."

ಇಲ್ಲಿನ ಸೃಜನಾ ರಂಗಮಂದಿರದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಅರ್ಥಶಾಸ್ತ್ರ ವಿಭಾಗ ಮತ್ತು ಭಾರತೀಯ ಜೀವವಿಮಾ ನೌಕರರ ಸಂಘದ ಸಂಯುಕ್ತ ಆಶ್ರಯದಲ್ಲಿ ಎರಡು ದಿನಗಳ ಕಾಲ ಹಮ್ಮಿಕೊಂಡಿದ್ದ ರಾಷ್ಟ್ರದ ಬೆಳವಣಿಗೆಯಲ್ಲಿ ಜೀವವಿಮಾ ನಿಗಮದ ಪಾತ್ರ ಎಂಬ ವಿಷಯದ ಮೇಲಿನ ರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಡಾ ಆಸ್ಕರ್ ಫರ್ನಾಂಡಿಸ್ ಮಾತನಾಡಿದರು. ದೇಶದ ಶೇ.30 ರಷ್ಟು ಜನತೆ ಇಂದಿಗೂ ಬಡತನ ರೇಖೆಗಿಂತ ಕೆಳಗೆ ಉಳಿದವರಿದ್ದಾರೆ. ಅವರಿಗೆ ಆರ್ಥಿಕ ಸ್ವಾತಂತ್ರ್ಯ ಇದೂವರೆಗೆ ಸಿಕ್ಕಿಲ್ಲ. ಎಲ್.ಐ.ಸಿ. ಆರ್ಥಿಕ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಜನ್ಮ ತಾಳಿದ ಒಂದು ಸಂಸ್ಥೆ. ದೇಶದ ಶೇ.99.74 ರಷ್ಟು ಜನ ಈ ಎಲ್.ಐ.ಸಿ.ಯಿಂದ ವಿಮಾ ಹಣವನ್ನು ಪಡೆದುಕೊಂಡಿದ್ದಾರೆ. ಈ ಸಂಸ್ಥೆಯಲ್ಲಿ ಭ್ರಷ್ಟಾಚಾರ ಹಾಗೂ ಯಾವುದೇ ಹಗರಣಗಳು ನಡೆದ ಉದಾಹರಣೆಗಳೇ ಇಲ್ಲ ಎಂದರು.

ದೇಶದ ಜನತೆ ಬ್ಯಾಂಕ್ ಮತ್ತು ಎಲ್‌ಐಸಿಗಳಲ್ಲಿ ತಮ್ಮ ಹಣವನ್ನು ಉಳಿತಾಯ ಮಾಡಿಕೊಳ್ಳಬಹುದು. ಬ್ಯಾಂಕ್‌ನಲ್ಲಿ ಹಣ ಉಳಿತಾಯ ಮಾಡಿದರೆ, ಎರಡು ಅಥವಾ ಮೂರು ದಿನ ಬಿಟ್ಟು ಮತ್ತೇ ಆ ಹಣವನ್ನು ನಾವು ಪಡೆದುಕೊಳ್ಳತ್ತೇವೆ. ಆದರೆ. ಎಲ್.ಐ.ಸಿ ಯಲ್ಲಿ ಹಣವನ್ನು ಹೂಡಿಕೆ ಮಾಡಿದರೆ ಬೋನಸ್ ಮತ್ತು ಹಲವಾರು ಸೌಲಭ್ಯಗಳೊಂದಿಗೆ ದೊಡ್ಡ ಮೊತ್ತದ ಹಣವನ್ನು ಪಡೆದುಕೊಳ್ಳಬಹುದು' ಎಂದರು.

"ಖಾಸಗಿ ವಿಮಾ ಕಂಪೆನಿ ಹಾಗೂ ಎಲ್.ಐ.ಸಿ ಮಧ್ಯೆ ಪೈಪೋಟಿ ಬೆಳೆದಿದೆ. ಆದರೆ, ಎಲ್.ಐ.ಸಿ. ಮಾತ್ರ ಪ್ರಗತಿ ಸಾಧಿಸುತ್ತಲೇ ಇದೆ. ಈ ಸಂಸ್ಥೆಯಲ್ಲಿ ಜನರು ಹೂಡಿದ ಹಣಕ್ಕೆ ನೇರವಾಗಿ ಭಾರತ ಸರ್ಕಾರ ಜವಾಬ್ದಾರಿ ಹೊತ್ತಿರುತ್ತದೆ. ಒಂದು ರೂಪಾಯಿ ಉಳಿದರು ಕೂಡ ಅದನ್ನು ಪಾಲಸಿದಾರರಿಗೆ ಮುಟ್ಟಿಸುವಂಥ ಸಂಸ್ಥೆ ಇದಾಗಿದೆ' ಎಂದರು.

"ದೇಶದ ಇತರ ವಿಶ್ವವಿದ್ಯಾಲಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕ ವಿಶ್ವವಿದ್ಯಾಲಯ ಉತ್ತಮ ಶಿಕ್ಷಣವನ್ನು ನೀಡುತ್ತಿದೆ. ಗ್ರಾಮೀಣ ಕ್ಷೇತ್ರದಿಂದ ಬಂದಂಥ ವಿದ್ಯಾರ್ಥಿಗಳು ಕವಿವಿಯಿಂದ ಉತ್ತಮ ಶಿಕ್ಷಣವನ್ನೇ ಪಡೆದುಕೊಂಡಿದ್ದಾರೆ. "ಎಲ್‌ಐಸಿ ಸಂಸ್ಥೆ ಭಾರತದ ಜನತೆಗೆ ದೊರೆತ ಕೋಹಿನೂರು ವಜ್ರ' ಎಂದು ರಾಜ್ಯಸಭಾ ಸದಸ್ಯ ಆಸ್ಕರ್ ಫರ್ನಾಂಡಿಸ್ ಅಭಿಪ್ರಾಯಪಟ್ಟರು. ಜಗತ್ತಿನ 200 ವಿವಿಗಳ ಪಟ್ಟಿಯಲ್ಲಿ ನಮ್ಮ ದೇಶದ ಯಾವುದೇ ವಿಶ್ವವಿದ್ಯಾಲಯ ಸ್ಥಾನ ಪಡೆಯದೇ ಇರುವುದು ಖೇದಕರ ಸಂಗತಿ. ಆದರೆ, ನಮ್ಮ ದೇಶದಲ್ಲಿ ಮಾತ್ರ ಕವಿವಿ ಪ್ರಖ್ಯಾತಿಯನ್ನು ಪಡೆದುಕೊಂಡಿದೆ' ಎಂದರು.

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಪ್ರಮೋದ ಗಾಯಿ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಪ್ರೊ.ಎಸ್.ಎಸ್.ಕಟ್ಟಿಮನಿ, ಉಪಪ್ರಾಚಾರ್ಯೆ ಡಾ.ರಾಜೇಶ್ವರಿ ಮಹೇಶ್ವರಯ್ಯ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎಸ್. ಹೊನ್ನಪ್ಪ, ಜೀವವಿಮಾ ನಿಗಮ ನೌಕರರ ಸಂಘದ ಕಾರ್ಯದರ್ಶಿ ಉದಯ ಗದಗಕರ ಮತ್ತಿತರರು ಇದ್ದರು. ಡಾ.ಸ್ಟೀವನ್ ಸ್ಟೆಲ್ಲಾ ನಿರೂಪಿಸಿದರು. ಡಾ.ಅನ್ನಪೂರ್ಣ ವಂದಿಸಿದರು.

–ನಿವೇದಿತಾ
5ನೇ ಸೆಮಿಸ್ಟರ್

# ಟ್ವೆಕಾಂಡೋ ಸ್ಪರ್ಧೆಗೆ ಚಾಲನೆ

ಪ್ರತಿಯೊಬ್ಬ ಕ್ರೀಡಾಪಟು ಸೋಲು ಗೆಲುವನ್ನು ಸಮಾನಾಂತರವಾಗಿ ಸ್ವೀಕರಿಸಿದಾಗ ಮಾತ್ರ ಅವನು ಕ್ರೀಡೆಯಲ್ಲಿ ಯಶಸ್ಸನ್ನು ಸಾಧಿಸಬಲ್ಲ ಆದ್ದರಿಂದ ಕ್ರೀಡಾಪಟುಗಳು ಕ್ರೀಡಾ ಸ್ಪೂರ್ತಿಯನ್ನು ಮೈಗೂಡಿಸಿಕೊಳ್ಳಿ ಎಂದು ಕರ್ನಾಟಕ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಸ್.ಎಸ್. ಕಟ್ಟಿಮನಿ ಕ್ರೀಡಾಪಟುಗಳಿಗೆ ಕರೆ ನೀಡಿದರು. ಅವರು ಕರ್ನಾಟಕ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದದಲ್ಲಿ ಹಮ್ಮಿಕೊಂಡ ಕರ್ನಾಟಕ ವಿಶ್ವವಿದ್ಯಾಲಯ ಮಟ್ಟದ ಎರಡು ದಿನಗಳ ಟ್ವೇಕಾಂಡೂ ಅಂತರ ಮಹಾವಿದ್ಯಾಲಯಗಳ ಏಕವಲಯ ಸ್ಪರ್ಧೆ ಮತ್ತು ಆಯ್ಕೆಯ ಪ್ರಕ್ರಿಯೆಗೆ ಚಾಲನೆ ನೀಡಿ ಮಾತನಾಡಿದರು.




ಪ್ರಾಚಾರ್ಯರಾದ ಡಾ.ಎಸ್.ಎಸ್.ಕಟ್ಟಿಮನಿ ಟ್ವೆಕಾಂಡೋ ಸ್ಪರ್ಧೆಯ ಸಸಿಗೆ ನೀರು ಹಾಕುವುದರ ಮೂಲಕ ಚಾಲನೆ ನೀಡುತ್ತಿರುವದು.

ಇಂದು ವಿಶ್ವದ ಸಣ್ಣ ಸಣ್ಣ ದೇಶಗಳು ಕ್ರೀಡೆಗಳಲ್ಲಿ ಮಹತ್ವದ ಸಾಧನೆ ಮಾಡುತ್ತಿದ್ದು ಅಂತಹ ದೇಶದ ಪ್ರತಿಯೊಬ್ಬ ಕ್ರೀಡಾಪಟು ಸೋಲು ಗೆಲುವನ್ನು ಸಮಾನಾಂತರವಾಗಿ ಸ್ವೀಕರಿಸಿದಾಗ ಮಾತ್ರ ಅವನು ಕ್ರೀಡೆಯಲ್ಲಿ ಯಶಸ್ಸನ್ನು ಸಾಧಿಸಬಲ್ಲ. ಆದ್ದರಿಂದ ಕ್ರೀಡಾಪಟುಗಳು ಕ್ರೀಡಾ ಸ್ಪೂರ್ತಿಯನ್ನು ಮೈಗೂಡಿಸಿಕೊಳ್ಳಿ ಎಂದು ಕರ್ನಾಟಕ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಸ್.ಎಸ್. ಕಟ್ಟಿಮನಿ ಕ್ರೀಡಾಪಟುಗಳಿಗೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಹಾಜರಿದ್ದ ಉಪ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಇಂದಿನ ವಿದ್ಯಾರ್ಥಿಗಳಿಗೆ ದೈಹಿಕ ಸಾಮರ್ಥ್ಯ ಬಹಳ ಮುಖ್ಯವಾಗಿದ್ದು, ಕಾಲೇಜಿನ ಎಲ್ಲ ವಿದ್ಯಾರ್ಥಿಗಳು ದೈಹಿಕವಾಗಿ ಮತ್ತು ಆರೋಗ್ಯಕರವಾಗಿ ಬೆಳೆಯಬೇಕಾದರೆ ಒಂದಿಲ್ಲೊಂದು ಕ್ರೀಡೆಯನ್ನು ಹವ್ಯಾಸವನ್ನಾಗಿ ಬೆಳಸಿಕೊಳ್ಳಬೇಕಾಗಿದೆ ಎಂದರು.

ಈ ಸ್ಪರ್ಧಾವಳಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಧಾರವಾಡ, ಕಾರವಾರ ಗದಗ ಮತ್ತು ಹಾವೇರಿ ಜಿಲ್ಲೆ ವ್ಯಾಪ್ತಿಯ ಕಾಲೇಜಿನ 15 ವಿದ್ಯಾರ್ಥಿಗಳು ಮತ್ತು 10 ವಿದ್ಯಾರ್ಥಿನೀಯರು ಒಟ್ಟು 25 ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ವಿವಿಧ ಕಾಲೇಜಿನ ದೈಹಿಕ ಶಿಕ್ಷಕರು ಮತ್ತು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ದೈಹಿಕ ನಿರ್ದೇಶಕ ಡಾ ಜಗದೀಶ ಟಿ ಗುಡಗುರ್ ಹಾಜರಿದ್ದರು.

–ಅಭಿಷೇಕ್
5ನೇ ಸೆಮಿಸ್ಟರ್

# "ಸಂಸ್ಕೃತ ಭಾಷಾ ಕಾರ್ಯಾಗಾರ ಉದ್ಘಾಟನೆ"

ನಮ್ಮ ದೇಶದಲ್ಲಿ ವಿಜ್ಞಾನ ಸಮಾಜ ಮತ್ತು ವಿದೇಶಿ ಭಾಷೆಗಳಿಗೆ ಸಿಗುವ ಮನ್ನಣೆ ಸಂಸ್ಕೃತ ಭಾಷೆಗೆ ಸಿಗುತ್ತಿಲ್ಲ ಆದ್ದರಿಂದ ಇಂದು ನಮ್ಮ ವಿದ್ಯಾರ್ಥಿಗಳಿಗೆ ಸಂಸ್ಕೃತ ಭಾಷೆಯ ಮಹತ್ವವನ್ನು ತಿಳಿಸಿಕೊಡಬೇಕಾದ ಅವಶ್ಯಕತೆ ಇದೆ ಎಂದು ಧಾರವಾಡ ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶರಾದ ವಿ. ಶ್ರೀಶಾನಂದ ಎಂದು ಅಭಿಪ್ರಾಯ ಪಟ್ಟರು.

ಅವರು ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಹಯೋಗದಲ್ಲಿ ಸಂಸ್ಕೃತ ವಿಭಾಗವು ಬಿಬಿಎ ಸಭಾಂಗಣದಲ್ಲಿ ಹಮ್ಮಿಕೊಂಡ ಒಂದು ದಿನದ ಅಂತರ ಮಹಾವಿದ್ಯಾಲಯಗಳ ಸಂಸ್ಕೃತ ಭಾಷಾ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಸಂಸ್ಕೃತ ಭಾಷೆಯು ಜಗತ್ತಿನ ಅತ್ಯಂತ ಹಳೆಯ ಭಾಷೆಯಾಗಿದ್ದು, ಇದು ನಾಗರಿಕತೆಯನ್ನು ಬೆಳೆಸುವಲ್ಲಿ ಮತ್ತು ಭಾಷಾ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದರು.



ಚಿತ್ರದಲ್ಲಿ ಧಾರವಾಡ ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶರಾದ ವಿ. ಶ್ರೀಶಾನಂದ ಅವರು ಸಂಸ್ಕೃತ ಭಾಷಾ ಕಾರ್ಯಾಗಾರವನ್ನು ಉದ್ಘಾಟನೆ ಮಾಡುತ್ತಿರುವುದು.

ಸಂಸ್ಕೃತ ಭಾಷೆಯು ಉಗಮವಾದ ನಂತರ ಅದರ ಜೊತೆಗೆ ಅನೇಕ ಕಟ್ಟುಪಾಡುಗಳಾದ ಪರಂಪರೆ, ಸಂಪ್ರದಾಯ, ನಿಯಮ ಮತ್ತು ಪದ್ದತಿ ಶಿಷ್ಟಾಚಾರ ಹುಟ್ಟಿಕೊಂಡವು ಎಂದು ಸಂಸ್ಕೃತ ಭಾಷೆಯ ಮಹತ್ವವನ್ನು ತಿಳಿಸಿಕೊಟ್ಟರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಸ್.ಎಸ್. ಕಟ್ಟಿಮನಿ ಮಾತನಾಡಿ ಭಾಷೆಯು ಒಂದು ಸಶಕ್ತ ಮಾಧ್ಯಮ ಸಂವಹನವಾಗಿರುವುದರಿಂದ ಭಾಷೆಗಳಲ್ಲಿ ವಿವಿಧ ಸಾಹಿತ್ಯಿಕ ಪರ್ಯಾಯ ರೂಪಗಳನ್ನು ಹೊಂದಿದ್ದು, ಅವುಗಳಲ್ಲಿ ಸಾಹಿತ್ಯಿಕ ಮತ್ತು ಸಾಮಾನ್ಯ ಭಾಷೆಗಳಿದ್ದು, ಸಾಮಾನ್ಯ ಭಾಷೆಯು ಇಂದು ಸಾಹಿತ್ಯಿಕ ಭಾಷೆಯಾಗಿ ಅದು ಅಭ್ಯಸಿಸಬಹುದಾದ ಭಾಷೆಯಾಗಿದೆ ಎಂದು ಹೇಳಿದರು..ಕಾರ್ಯಾಗಾರದಲ್ಲಿ ಹುಬ್ಬಳ್ಳಿ ಮತ್ತು ಧಾರವಾಡದ ವಿವಿಧ ಕಾಲೇಜುಗಳಿಂದ ನೂರಕ್ಕು ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕರ್ನಾಟಕ ಕಲಾ ಮಹಾವಿದ್ಯಾಲಯದ ಉಪ ಪ್ರಾಚಾರ್ಯರಾದ ಡಾ. ರಾಜೇಶ್ವರಿ ಮಹೇಶ್ವರಯ್ಯ ಮತ್ತು ವಿಭಾಗದ ಪ್ರಾಧ್ಯಾಪಕರು ಉಪಸ್ಥಿತರಿದ್ದರು. ಸಂಸ್ಕೃತ ಭಾಷೆಯ ಕುರಿತು ತಜ್ಞರಿಂದ ಗೋಷ್ಠಿಗಳಲ್ಲಿ ತಮ್ಮ ವಿಷಯವನ್ನು ಪ್ರಸ್ತುತ ಪಡಿಸಿದರು. ಕಾರ್ಯಕ್ರಮವನ್ನು ಅಪೂರ್ವ ಮತ್ತು ಪೂರ್ಣಚಂದ್ರ ನಿರೂಪಿಸದರು. ಕಾಲೇಜಿನ ಸಂಸ್ಕೃತ ವಿಭಾದ ಮುಖ್ಯಸ್ಥರಾದ ಡಾ. ರಜನಿ ಹೆಚ್ ಅತಿಥಿಗಳನ್ನು ಸ್ವಾಗತಿಸಿ ಪರಿಚಿಸಿದರು.

–ಕುಮಾರ್(3 ನೇ ಸೆಮಿಸ್ಟರ್)

## ಬೆಳಕು

ಜೀವನ ಎನ್ನುವುದು ಬುದ್ಧಿವಂತನಿಗೆ ಕನಸು, ಮೂರ್ಖನಿಗೆ ಆಟ, ಸಿರಿವಂತನಿಗೆ ತಮಾಷೆ ಮತ್ತು ಬಡವನಿಗೆ ದುರಂತ.

–ಶೊಲೋಮ್ ಅಲೆಚಮ್

## ನೀವು ಕಳಿಸಿ

ಪ್ರಿಯ ಓದುಗ ಸ್ನೇಹಿತರೇ, ನಿಮ್ಮ ಅನಿಸಿಕೆ, ಅಭಿಪ್ರಾಯಗಳು ಹಾಗೂ ಕಥೆ, ಕವನಗಳನ್ನು ಸಹ ಈ ಕೆಳಕಂಡ ವಿಳಸಾಕ್ಕೆ ಕಳುಹಿಸಿಕೊಡಿ. ಪ್ರತಿ ವಾರ ಸಂಚಿಕೆಯಲ್ಲಿ ನಿಮ್ಮ ಬರಹಗಳನ್ನು ಪ್ರಕಟಿಸಲಾಗುವುದು.

Email id- Principal@kacd.ac.in

ಗೌರವ ಸಂಪಾದಕರು: ಡಾ. ಎಸ್.ಎಸ್.ಕಟ್ಟಿಮನಿ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ.ಈಶ್ವರ್ ಗೌಡ ಪಾಟೀಲ್,ವಿದ್ಯಾರ್ಥಿ ಸಂಪಾದಕರು: ಅಭಿಷೇಕ್,ಅಂಕಿತ. ಪುಟ ವಿನ್ಯಾಸ: ಶ್ರೀಹರಿ.